sdmimd

**Kannada Prabha (Mysuru Prabha)**

**Date:** Oct 6, 2015 Page No. 13

**Edition:** Mysuru Language: Kannada

# ಉದ್ಯಮಿಗಳು ಸಮಾಜದ ಹಿತ ಕಡೆಗಣಿಸಬಾರದು

• **ಕನ್ನಡಪ್ರಭ ವಾರ್ತೆ** ಮೈಸೂರು

ಲಾಭ ಗಳಿಕೆಯ ಭರಾಟೆಯಲ್ಲಿ ಸಮಾಜದ ಹಿತ ಕಡೆಗಣಿಸುವುದು ಸರಿಯಲ್ಲ ಎಂದು ಟಾಟಾ ಸ್ಟೀಲ್‌ನ ಮಾಜಿ ಅಧ್ಯಕ್ಷ ಬಿ. ಮುತ್ತುರಾಮನ್ ಅಭಿಪ್ರಾಯಪಟ್ಟರು.

ನಗರದ ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಗುರುವಾರ ಆಯೋಜಿಸಿದ್ದ ಎರಡು ದಿನಗಳ ಉದ್ಯಮಿಗಳಿಂದ ಸಾಮಾಜಿಕ ಕಳಕಳಿ ಕುರಿತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಇದ್ದರೆ ಉದ್ಯಮ ಉಳಿಯಲು ಸಾಧ್ಯ. ಆದ್ದರಿಂದ ನಾವು ಲಾಭ ಗಳಿಕೆಯ ಭರಾಟೆಯಲ್ಲಿ ಸಮಾಜದ ಹಿತವನ್ನು ನಿರ್ಲಕ್ಷಿಸಬಾರದು. ಗಳಿಸಿದ ಲಾಭದಲ್ಲಿಯೂ ಶೇಖಡವಾರು ಪಾಲನ್ನು ಸಮಾಜಕ್ಕೆ ನೀಡಬೇಕು ಎಂದು ತಿಳಿಸಿದರು.

ಭಾರತ ಈಗ ಮುಂದುವರಿಯುತ್ತಿರುವ ದೇಶ. ಇಲ್ಲಿನ ಸಾಮಾಜಿಕ ಸಮಸ್ಯೆಗಳು ದೇಶದ ಅಭಿವೃದ್ಧಿಗೆ ತೊಡಕುಂಟು ಮಾಡುತ್ತಿದೆ. ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಉದ್ಯಮಿಗಳ ಸಾಮಾಜಿಕ ಕಳಕಳಿ ಅಗತ್ಯ. ಈ ಹಿನ್ನೆಲೆಯೊಳಗೆ ನೋಡಿದರೆ ಇತರೆ ದೇಶಗಳಿಗೆ ಹೋಲಿಸಿಕೊಂಡರೆ ಭಾರತದ ಉದ್ಯಮಿಗಳಿಗೆ ಸಾಮಾಜಿಕ ಕಳಕಳಿ ಇದೆ. ಆದರೆ ಇದು ಇನ್ನಷ್ಟು ಹೆಚ್ಚಬೇಕು. ಈ ಕುರಿತು ಇನ್ನಷ್ಟು ಜಾಗೃತಿ ಮೂಡಬೇಕು ಎಂದರು.

ಕಾರ್ಯಕ್ರಮದಲ್ಲಿ ಎಟಿಎಸ್ ಕಂಪನಿ ಮುಖ್ಯಸ್ಥ ರಾಬರ್ಟ್, ಎಸ್‌ಡಿಎಂಐಎಂಡಿ ಕಾಲೇಜಿನ ಅಧ್ಯಕ್ಷ ಡಾ.ಎನ್.ಆರ್. ಪುರುಶುರಾಮನ್, ಪ್ರಾಧ್ಯಾಪಕರಾದ ಡಾ.ಎಂ.ಆರ್. ಸುರೇಶ್, ಪ್ರೊ.ಎನ್.ಆರ್. ಗೋವಿಂದ ಶರ್ಮ ಇದ್ದರು.